

ಧಾರವಾಡದಲ್ಲಿ 2013ರಲ್ಲಿ ನಡೆದ ಸಾಹಿತ್ಯ ಸಂಭ್ರಮಕ್ಕೆ ಸಾಕ್ಷಿಯಾದ ಸಾಹಿತಿಗಳು ಮತ್ತು ಸಾಹಿತ್ಯಪ್ರೇಮಿಗಳು.

# ಮೂರು ಧಾರೆಗಳ ರಭಸ

**ವಿನಯಾ ಒಕ್ಕುಂದ**

## ಸಾಹಿತ್ಯ ಉತ್ಸವಗಳ ಸುತ್ತ...

ಊರುಮನೆಗಳ ಅನುದಿನದ ಬದುಕು ಹೊಸ ಕಸುವನ್ನು ಕೂಡಿಸಿಕೊಳ್ಳಲು ಮರುಚೈತನ್ಯವನ್ನು ಪಡೆಯಲು ಹಬ್ಬಹರಿದಿನ, ಜಾತ್ರೆ ಜಾಪತ್ರೆಗಳು ಅಗತ್ಯವೆಂದು ಜನಸಮುದಾಯದ ವಿವೇಕ ಕಂಡುಕೊಂಡಿದೆ. ನಡೆಸಿಕೊಂಡೂ ಬಂದಿದೆ. ಈ ಕೂಡುವಿಕೆ ಸಂಭ್ರಮದ ಸಂಗತಿಯಷ್ಟೇ ಆಗಿರುವುದಿಲ್ಲ. ನಡೆದು ಬಂದ ದಾರಿಯನ್ನು ತಿರುವಿ ನೋಡಿ ಕೊಳೆ, ಕಸಗಳನ್ನು ಕತ್ತರಿಸಿ, ಮರು ಪರಾಮರ್ಶೆಗೆ ಒಡ್ಡಿಕೊಂಡು, ಅಂದುಆಡಿ, ತಿದ್ದಿತೀಡಿ ಮತ್ತೆ ಒಂದಾಗಿ ಮುನ್ನಡೆವ ಸದವಕಾಶವೂ ಆಗಿರುತ್ತದೆ. ಪ್ರಪಂಚದಾದ್ಯಂತ ಯಾವುದೇ ಕಲಾಪ್ರಕಾರ ಇಂತಹ ಅಭಿರುಚಿಯನ್ನು ಒಡಲುಗೊಂಡೇ ಬೆಳೆದಿದೆ. ಸಾಹಿತ್ಯ ಸಮ್ಮೇಳನಗಳೂ ಅಂತಹ ಒಂದು ನಡೆಯೇ. ಸಮಾವೇಶಗಳಂತಹ ಅಭಿಪ್ರಾಯ ಹಂಚಿಕೊಳ್ಳುವಿಕೆಗಳು ಹಲವೆಂಟು ಸಂಗತಿಗಳನ್ನು ಕೈದಾಟಿಸುತ್ತಿರುತ್ತವೆ. ಯುವ ಸಮುದಾಯ ಅಧ್ಯಯನದ ವೈಧಾನಿಕತೆಯನ್ನು ಪಡೆಯುವುದಕ್ಕಿಂತ ಹೆಚ್ಚಾಗಿ ವಿವೇಚನೆಯ ಜಾಣ್ಮೆಯನ್ನು ಪಡೆಯುತ್ತದೆ. ಆಸಕ್ತಿ, ಅಭಿರುಚಿಗಳಿಗೆ ಆಸ್ಪದ